## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಹಳದಪ್ಪ, ಹಿಂದಿನ ಕಾರ್ಯದರ್ಶಿ (ಹಾಲಿ ನಿವೃತ್ತ), ಚಿನ್ನಿಕಟ್ಟೆ ಗ್ರಾಮ ಪಂಚಾಯಿತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧದ ನಡವಳಿ ಕುರಿತು.

**ಓದಲಾಗಿದೆ:**

1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ಉಪಲೋಕ್/ಬಿಡಿ-510/2014/ಡಿಆರ್ಇ-1, ದಿನಾಂಕ: 19-02-2018.
2. ಮಾನ್ಯ ಉಪಲೋಕಾಯಕ್ತರವರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಡಿ-510/2014/ಡಿಆರ್ಇ-1, ದಿನಾಂಕ:03/12-02-2018.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ದಿನಾಂಕ:19-02-2018 ರವರ ಪತ್ರದೊಂದಿಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 9 ರನ್ವಯ ಮಾನ್ಯ ಉಪಲೋಕಾಯುಕ್ತರವರ ಸಲ್ಲಿಸಿರುವ ವರದಿಯಲ್ಲಿ ಶ್ರೀ ಸುಬ್ರಮಣ್ಯ ಎ ಬಿನ್ ಅಣ್ಣಾಮಲೈ ವಿ, ಚಿನ್ನಿಕಟ್ಟೆ ಗ್ರಾಮ ಪಂಚಾಯತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು 1)ಶ್ರೀಮತಿ ಕುಸುಮಾಬಾಯಿ, ಅಧ್ಯಕ್ಷರು, ಚಿನ್ನಿಕಟ್ಟೆ ಗ್ರಾಮ ಪಂಚಾಯತಿ 2)ಶ್ರೀ ಹಳದಪ್ಪ, ಹಿಂದಿನ ಕಾರ್ಯದರ್ಶಿ (ಹಾಲಿ ನಿವೃತ್ತ), ಚಿನ್ನಿಕಟ್ಟೆ ಗ್ರಾಮ ಪಂಚಾಯತಿ ಮತ್ತು 3)ಶ್ರೀಮತಿ ರಜನಿ ಎಂ, ಕಂಪ್ಯೂಟರ್ ಆಪರೇಟರ್, ಚಿನ್ನಿಕಟ್ಟೆ ಗ್ರಾಮ ಪಂಚಾಯತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ (ಇನ್ನು ಮುಂದೆ ಎದುರುದಾರರುಗಳು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

**ದೂರಿನ ಸಂಕ್ಷಿಪ್ತ ವಿವರಣೆ:**

ದೂರುದಾರರು ತಮ್ಮ ದೂರಿನಲ್ಲಿ ಚಿನ್ನಿಕಟ್ಟೆ ಗ್ರಾಮ ಪಂಚಾಯತಿಯ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತಿಯ 13ನೇ ಹಣಕಾಸು ಮತ್ತು ಎನ್ಆರ್ಇಜಿಎ ಯೋಜನೆಯ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

ದೂರುದಾರರು ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 1 ಮತ್ತು 2ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ 2012-13ನೇ ಸಾಲಿನ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಬಿದರಹಳ್ಳಿ ಗ್ರಾಮದ ಶೇಖರಪ್ಪನ ಗದ್ದೆಯಿಂದ ಭೂತಪ್ಪನ ಕೆರೆಯವರೆಗೆ ಬಸಿ ಕಾಲುವೆ ಕಾಮಗಾರಿಯ ವಿಚಾರವಾಗಿ ಯಾವುದೇ ಕಳಪೆ ಕಾಮಗಾರಿಯಾಗಿರುವುದಿಲ್ಲ. ಸದರಿ ಕಾಮಗಾರಿಯನ್ನು ಕೂಲಿಗಾರರೇ ಮಾಡಿದ್ದು, ಸದರಿಯವರಿಗೆ ಬ್ಯಾಂಕ್ ಮುಖಾಂತರ ಹಣ ಖಾತೆಗಳಿಗೆ ಜಮೆಯಾಗಿರುತ್ತದೆ. ಕಾಮಗಾರಿಯ ವಿಚಾರವಾಗಿ ಮಧ್ಯವರ್ತಿಗಳಿಗೆ ಹಣ ಪಾವತಿಯಾಗಿರುವುದಿಲ್ಲ. 2012-13ನೇ ಸಾಲಿನ 13ನೇ ಹಣಕಾಸು ಯೋಜನೆಯಲ್ಲಿ ಕಾಮಗಾರಿಗಳು ಸುವ್ಯವಸ್ಥಿತವಾಗಿದ್ದು ಕಳಪೆಯಾಗಿರುವುದಿಲ್ಲ. ಕಾಮಗಾರಿ ಹಣವನ್ನು ಸಂಬಂಧಪಟ್ಟ ಗುತ್ತಿಗೆದಾರರಿಗೆ ಜಮಾ ಮಾಡಲಾಗಿರುತ್ತದೆಯೆಂದು ಹೇಳಿರುತ್ತಾರೆ.

ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಎದುರುದಾರರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ತಮ್ಮ ಅನುಕೂಲಕ್ಕೆ ತಕ್ಕಂತೆ ದಾಖಲೆಗಳನ್ನು ತಿರುಚಿಕೊಂಡು ಮೂಲ ಕೆಲಸ ನಿರ್ವಹಿಸಿದ ಕಾಂಟ್ರ್ಯಾಕ್ಟ್‌ದಾರರಿಗೆ ಹಣ ನೀಡದೆ ವಂಚಿಸಿರುತ್ತಾರೆ. ಎನ್ಆರ್ಇಜಿಎ ಕಾಮಗಾರಿಯಲ್ಲಿ ಕಾಮಗಾರಿ ನಿರ್ವಹಿಸಿದ ಕಾರ್ಮಿಕರಿಗೆ ಹಣ ನೀಡದೆ ತಮ್ಮ ಹತ್ತಿರದ ಸಂಬಂಧಿಗಳು ಮತ್ತು

ಬೆಂಬಲದರರ ಹೆಸರಿಗೆ ದಾಖಲೆಗಳನ್ನು ತಿರುಚಿಕೊಂಡು ಅವರ ಹೆಸರಿನಲ್ಲಿ ಹಣ ಜಮಾ ಮಾಡಿ ನಂತರ ಹಣವನ್ನು ಹಂಚಿಕೊಂಡಿರುತ್ತಾರೆ. 2015ರ ಜನವರಿಯಿಂದ ಈಚೆಗೆ 13ನೇ ಹಣಕಾಸು ಯೋಜನೆಯಡಿಯಲ್ಲಿ ಕೆಲಸ ನಿರ್ವಹಿಸಿದ ಕಾಂಟ್ರ್ಯಾಕ್ಟದಾರರಾದ ಕುಮಾರಸ್ವಾಮಿಯವರಿಗೆ ಕಾರ್ಯದರ್ಶಿಯವರು ಇನ್ನೂ ಹಣ ಪಾವತಿ ಮಾಡಬೇಕಾಗಿದೆ. ಬಿದರಹಳ್ಳಿ ವಾರ್ಡನ ಶೇಖರಪ್ಪನ ಗದ್ದೆಯಿಂದ ಭೂತಪ್ಪನ ಕೆರೆಯವರೆಗೆ ಮಾಡಿದ ಬಸಿ ಕಾಲುವೆ ಕಾಮಗಾರಿಗೆ ಕಾರ್ಮಿಕರಿಗೆ ಪಣ ಸಂದಾಯವಾಗಿರುವುದಿಲ್ಲ. ಎದುರುದಾರರು ಹಾಜರುಪಡಿಸಿದ ಎಫ್.ಟಿ.ಓ ಕಾಪಿ ನಕಲಿಯಾಗಿರುತ್ತದೆ. ಗ್ರಾಮ ಪಂಚಾಯತಿ ಅಧ್ಯಕ್ಷೆ ಮತ್ತು ಅವರ ಗಂಡನ ವಿರುದ್ಧ ಹೊನ್ನಾಳಿ ನ್ಯಾಯಾಲಯದಲ್ಲಿ ಕ್ರಿಮಿನಲ್ ಕೇಸ್ ದಾಖಲಾಗಿರುತ್ತದೆ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ದೂರುದಾರರ ದೂರು ಹಾಗೂ ಪ್ರತ್ಯುತ್ತರವನ್ನು ಪರಿಶೀಲಿಸಿದಾಗ, ಎನ್‌ಆರ್‌ಇಜಿಎ ಯೋಜನೆಯಲ್ಲಿ ಕಾರ್ಮಿಕರಿಗೆ ಮತ್ತು ಗುತ್ತಿಗೆದಾರರಿಗೆ ಎದುರುದಾರರು ಹಣವನ್ನು ಪಾವತಿಸದೆ ದಾಖಲೆಗಳನ್ನು ಸೃಷ್ಟಿಸಿಕೊಂಡು ಅವರೇ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂದು ಹೇಳಿರುತ್ತಾರೆ. ಎದುರುದಾರರು ತಮ್ಮ ಆಕ್ಷೇಪಣೆಯ ಜೊತೆ ಕಾಮಗಾರಿ ನಿರ್ವಹಿಸಿದ ಬಗ್ಗೆ ಸೂಕ್ತವಾದ ದಾಖಲಾತಿಗಳನ್ನು ಹಾಗೂ ಹಣ ಪಾವತಿ ಮಾಡಿದ ಬಗ್ಗೆ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಿನಾಂಕ:29-05-2014 ರಂದು ಗೌರವಾನ್ವಿತ ಉಪಲೋಕಾಯುಕ್ತರು ದಾವಣಗೆರೆ ಪ್ರವಾಸದ ಸಂದರ್ಭದಲ್ಲಿ ಮೂಲ ಕಡತ ಕಾಣೆಯಾಗಿರುತ್ತದೆಯೆಂದು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿರುವುದು ಕಂಡುಬಂದ ಕಾರಣ ದೂರುದಾರರ ದೂರಿನ ಬಗ್ಗೆ ತನಿಖೆಯನ್ನು ನಡೆಸಿ ವರದಿಯನ್ನು ಸಲ್ಲಿಸುವಂತೆ ಪೋಲಿಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರಿಗೆ ಆದೇಶಿಸಲಾಗಿತ್ತು.

**<u>ಪೋಲಿಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರ ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಈ ಕೆಳಗಿನಂತೆ ಅಭಿಪ್ರಾಯವನ್ನು ನೀಡಿರುವುದು ಕಂಡುಬರುತ್ತದೆ.</u>**

"1 ಮತ್ತು 2ನೇ ಆಪಾದನೆಗಳಿಗೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಯವರು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಹೊನ್ನಾಳಿಯವರಿಂದ ದಾಖಲಾತಿಗಳನ್ನು ಪಡೆದು ಪರಿಶೀಲಿಸಿರುವುದು ಹಾಗೂ ದಿನಾಂಕ:02-03-2017 ರಂದು ಖುದ್ದು ಚಿನ್ನಿಕಟ್ಟೆ ಗ್ರಾಮಕ್ಕೆ ಭೇಟಿ ನೀಡಿ ಪಿಡಿಓ ವಿಜಯಕುಮಾರ್ ಸದರಿ ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರಾದ ಶ್ರೀ ಕುಮಾರಸ್ವಾಮಿ ಹಾಗೂ ಸ್ಥಳಿಯರೊಂದಿಗೆ ಮೇಲ್ಕಂಡ ಕಾಮಗಾರಿಗಳನ್ನು ನಿರ್ವಹಿಸಿದ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಲಾಗಿದ್ದು, ಬಿದರಹಳ್ಳಿ ಗ್ರಾಮದ ಕುಬೇರನಾಯ್ಕ ಮನೆಯಿಂದ ಶಂಕ್ರನಾಯ್ಕನ ಮನೆಯ ಹಿತ್ತಲಿನವರೆಗೆ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ 2012-13ನೇ ಸಾಲಿನಲ್ಲಿ ತುಂಡು ಗುತ್ತಿಗೆ ಮೇಲೆ ಕಾಮಗಾರಿ ನಿರ್ವಹಿಸಲು ರೂ.28,000/-ಗಳಿಗೆ ಕ್ರಿಯಾ ಯೋಜನೆ ಆದೇಶವಾಗಿದ್ದು, ನಂತರ 2014 ರಲ್ಲಿ ನಿಯಮಾನುಸಾರ ಇಓ, ಹೊನ್ನಾಳಿ ರವರ ಸೂಚನೆಯಂತೆ ಗ್ರಾಮ ಪಂಚಾಯತಿಯಲ್ಲಿ ಸದರಿ ಕಾಮಗಾರಿಯನ್ನು ನಿರ್ವಹಿಸಿದ್ದವರಿಗೆ ಹಣ ಪಾವತಿಸಹುದೆಂದು ಠರಾವು ಮಾಡಿಕೊಂಡು ಕಾಮಗಾರಿ ನಿರ್ವಹಿಸಿದ್ದ ಶ್ರೀ ಕುಮಾರಸ್ವಾಮಿ, ಗುತ್ತಿಗೆದಾರರು ಇವರಿಗೆ ಚೆಕ್ ಮೂಲಕ ರೂ.26,179/-ಗಳನ್ನು ಪಾವತಿಸಿರುವುದು ದಾಖಲಾತಿ ಹಾಗೂ ಕುಮಾರಸ್ವಾಮಿಯವರ ಹೇಳಿಕೆಯಿಂದ ಕಂಡುಬಂದಿರುತ್ತದೆ. ಅಲ್ಲದೆ ಚಿನ್ನಿಕಟ್ಟೆ ತಮಿಳುಕೇರಿಯಲ್ಲಿ ಪರ್ವತಪ್ಪ ಮನೆಯಿಂದ ಅಂಗನವಾಡಿವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಸಹ ತುಂಡು ಗುತ್ತಿಗೆ ಮೇಲೆ ನಿರ್ವಹಿಸಲು ಗುತ್ತಿಗೆದಾರರಾದ ಶ್ರೀ ಕುಮಾರಸ್ವಾಮಿ ಇವರಿಗೆ ಪಂಚಾಯತಿಯಿಂದ ವಹಿಸಿದ್ದು, ಅದರಂತೆ ಸದರಿಯವರು 2012-13ನೇ ಸಾಲಿನಲ್ಲಿ ಸದರಿ ಕಾಮಗಾರಿಯನ್ನು ಸಹ ನಿರ್ವಹಿಸಿರುವುದು ಸ್ಥಳ, ದಾಖಲಾತಿ ಹಾಗೂ ಶ್ರೀ ಕುಮಾರಸ್ವಾಮಿ ರವರ ಹೇಳಿಕೆಯಿಂದ ಕಂಡುಬಂದಿದ್ದು, ಅದರಂತೆ ಸದರಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ.18,500/- ಮೊತ್ತದಲ್ಲಿ ನಿರ್ವಹಿಸಲು ಪಂಚಾಯತಿಯವರು ಕ್ರಿಯಾಯೋಜನೆ ತಯಾರಿಸಿದ್ದು, ಕಾಮಗಾರಿ ಮುಕ್ತಾಯವಾದ ನಂತರ ತುಂಡು ಗುತ್ತಿಗೆ ಕರಾರು ಮೊತ್ತ ರೂ.18,280/-ಗಳ ಮಂಜೂರಾತಿ ನೀಡಿದ್ದು, ಆದರೆ ಗುತ್ತಿಗೆದರರಾದ ಶ್ರೀ ಕುಮಾರಸ್ವಾಮಿ ಇವರಿಗೆ ರೂ.12,955/- ಚೆಕ್ ನೀಡಿದ್ದು, ಇನ್ನು ಉಳಿದಿರುವ

ಮೊತ್ತವನ್ನು ಸದರಿಯವರಿಗೆ ಪಾವತಿಸಲು ಬಾಕಿ ಇರುವುದು, ದಾಖಲಾತಿಗಳು ಹಾಗೂ ಗುತ್ತಿಗೆದರರಾದ ಕುಮಾರಸ್ವಾಮಿ ಇವರ ಹೇಳಿಕೆಯಿಂದ ಕಂಡುಬಂದಿದ್ದು, ಸದರಿ ಕಾಮಗಾರಿಗಳನ್ನು ನಿರ್ವಹಿಸದೇ ಬೇರೆಯವರ ಹೆಸರಿನಲ್ಲಿ ಪಂಚಾಯತಿ ಅಧ್ಯಕ್ಷೆಯಾದ ಕುಸುಮಾಬಾಯಿ ಮತ್ತು ಪಿಡಿಓ ವಿಜಯಕುಮಾರ ಇವರು ನಕಲಿ ದಾಖಲೆ ಸೃಷ್ಟಿ ಮಾಡಿ ಅನುದಾನದ ಹಣವನ್ನು ದುರಪಯೋಗ ಮಾಡಿಕೊಂಡಿರುವ ಆರೋಪ ದೃಢಪಟ್ಟಿರುವುದಿಲ್ಲ.

2012–13ನೇ ಸಾಲಿನ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಬಿದರಹಳ್ಳಿ ಗ್ರಾಮದ ಶೇಖರಪ್ಪನ ಗದ್ದೆಯಿಂದ ಭೂತಪ್ಪನ ಕೆರೆಯವರೆಗೆ ಬಸಿ ಕಾಲುವೆ ಕಾಮಗಾರಿಗೆ ರೂ.1,00,000/– ಅನುದಾನ ಮೀಸಲಿಟ್ಟಿದ್ದು, ಇದನ್ನು ಸಿ.ಜಿ.ಮುರಿಗೇಸಪ್ಪ ಮತ್ತು ಇತರೆ 85 ಜನರು ಕಾಮಗಾರಿ ಪೂರ್ಣಗೊಳಿಸಿ ಕೂಲಿ ಹಣ ರೂ.92,000/–ವನ್ನು ನೀಡಲು ಫೋಟೋದೊಂದಿಗೆ ಪಂಚಾಯತಿಗೆ ಹಣ ಬಿಡುಗಡೆಮಾಡಲು ಕೋರಿಕೊಂಡಿದ್ದು, ಆದರೆ ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಪಿಡಿಓ ಸೇರಿಕೊಂಡು ವಾಸ್ತವವಾಗಿ ಕಾಮಗಾರಿ ಮಾಡಿದ್ದ ಮೂಲ ಕಾರ್ಮಿಕರಿಗೆ ಹಣ ನೀಡದೆ, ಸುಳ್ಳು ದಾಖಲೆ ಸೃಷ್ಟಿಸಿ ಸಂಬಂಧಪಡದ ಬೇರೊಂದು ಕಾಮಗಾರಿಯ ಫೋಟೋಗಳನ್ನು ಹಾಜರುಪಡಿಸಿ ಸದರಿ ಕಾಮಗಾರಿ ನಿರ್ವಹಿಸದ, ಬೇರೆ ಕೆಲಸಗಾರರ ನಕಲಿ ಪಟ್ಟಿ ಸಹಿ ಮತ್ತು ಹೆಬ್ಬೆಟ್ಟಿನ ಸಹಿ ಸೃಷ್ಟಿ ಮಾಡಿ ಹಣ ಪಡೆದುಕೊಂಡು ವಾಸ್ತವವಾಗಿ ಕಾಮಗಾರಿ ಮಾಡಿದ ಕೂಲಿ ಕಾರ್ಮಿಕರಿಗೆ ಕೂಲಿಯ ಹಣ ನೀಡದೆ ಹಣ ಮತ್ತು ಅಧಿಕಾರ ದುರ್ಬಳಕೆ ಮಾಡಿಕೊಂಡಿರುತ್ತಾರೆ ಎಂದು ಆಪಾದನೆ ಇದ್ದು, ಸದರಿ ಆಪಾದನೆಗೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಯವರು ದಿನಾಂಕ:02–03–2017 ರಂದು ಪಿಡಿಓ ಮತ್ತು ಸ್ಥಳೀಯರೊಂದಿಗೆ ಬಸಿ ಕಾಲುವೆ ಕಾಮಗಾರಿಯನ್ನು ನಿರ್ವಹಿಸಿದ ಸ್ಥಳವಾದ ಬಿದರಹಳ್ಳಿ ಗ್ರಾಮದ ಶೇಖರಪ್ಪನ ಗದ್ದೆಯಿಂದ ಭೂತಪ್ಪನ ಕೆರೆಯವರೆಗೆ ಬಸಿ ಕಾಲುವೆ ಕಾಮಗಾರಿಯನ್ನು ಪರಿಶೀಲಿಸಲಾಗಿದ್ದು, ಬಸಿಕಾಲುವೆ ನಿರ್ಮಿಸಿರುವುದು ಕಂಡುಬಂದಿದ್ದು, ನಂತರ ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಪರಿಶೀಲಿಸಿ, ನಂತರ ಕಾಮಗಾರಿ ನಿರ್ವಹಿಸಿದ್ದ ಬಗ್ಗೆ ಹಾಗೂ ತಮಗೆ ಕೂಲಿ ಮೊತ್ತವನ್ನು ತಮ್ಮ ಬ್ಯಾಂಕ್ ಖಾತೆಗೆ ನೇರವಾಗಿ ಪಂಚಾಯತಿಯಿಂದ ಜಮೆ ಮಾಡಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಅರ್ಜಿದಾರರು ದೂರಿನಲ್ಲಿ ಆರೋಪಿಸಿದಂತೆ ಬೇರೊಂದು ಕಾಮಗಾರಿ ಫೋಟೋ, ನಕಲಿಪಟ್ಟಿ ಸಹಿ ಮತ್ತು ಹೆಬ್ಬೆಟ್ಟಿನ ಸಹಿ ಸೃಷ್ಟಿ ಮಾಡಿಕೊಂಡು ಪಂಚಾಯತಿ ಅಧ್ಯಕ್ಷೆಯಾದ ಕುಸುಮಾಬಾಯಿ ಮತ್ತು ಪಿಡಿಓ ವಿಜಯಕುಮಾರ್ ಇವರು ಹಣ ದುರುಪಯೋಗಪಡಿಸಿಕೊಂಡಿರುವ ಈ ಆರೋಪವು ಸಹ ವಿಚಾರಣಾ ಕಾಲದಲ್ಲಿ ದೃಢಪಡದೇ ಇರುವುದು ವಿಚಾರಣಾ ವರದಿಯಿಂದ ಕಂಡುಬರುತ್ತದೆ ಎಂದು ಹೇಳಿರುತ್ತಾರೆ.

ತನಿಖಾ ವರದಿಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ತನಿಖೆಯ ಸಮಯದಲ್ಲಿ ದೂರುದಾರರಿಗೆ ತಿಳಿಸಿರುವುದಿಲ್ಲ. ದೂರುದಾರರು ಸದಸ್ಯರಾಗಿದ್ದಾಗ ಕುಬೇರನಾಯ್ಕರವರ ಮನೆಯಿಂದ ಶಂಕ್ರನಾಯ್ಕ ಹಿತ್ತಲವರೆಗೆ ಮತ್ತು ಚಿನ್ನಿಕಟ್ಟೆ ಗ್ರಾಮದ ತಮಿಳುಕೆರೆಯಲ್ಲಿ ಪರ್ವತಪ್ಪನ ಮನೆಯಿಂದ ಅಂಗನವಾಡಿವರೆಗೆ ರಸ್ತೆ ಅಭಿವೃದ್ಧಿಗೆ ರೂ.18,700/– ಮೀಸಲಿಟ್ಟು ಪಂಚಾಯತಿಯ ಪತ್ರದ ಮುಖಾಂತರ ದೂರುದಾರರ ಮೌಖಿಕ ಶಿಫಾರಸ್ಸಿನ ಮೇರೆಗೆ ಗುತ್ತಿಗೆದಾರರಾದ ಕುಮಾರಸ್ವಾಮಿಯವರು ಕಾಮಗಾರಿ ಪೂರ್ಣಗೊಳಿಸಿದರು. ಆದರೆ ಎದುರುದಾರರು ಸದರಿ ಕಾಮಗಾರಿಯನ್ನು ಗೌಡರ ನಾಗರಾಜಪ್ಪನ ಮನೆಯಿಂದ ಅಗಸೆ ಬಾಗಿಲವರೆಗೂ ಕಾಮಗಾರಿ ಮಾಡಿದ್ದೇವೆಂದು ತೋರಿಸಿ ದಾಖಲೆ ಸೃಷ್ಟಿಸಿ ಹಣ ಲಪಟಾಯಿಸಿರುತ್ತಾರೆ. ಆ ಬಗ್ಗೆ ದೂರು ನೀಡಿದಾಗ, ಅಧ್ಯಕ್ಷರು ಮತ್ತು ಪಂಚಾಯತಿಯವರು ಹೊಸ ಕ್ರಿಯಾ ಯೋಜನೆಯನ್ನು ಮಾಡಿ ಹಣ ಬಿಡುಗಡೆಗೊಳಿಸಿರುತ್ತಾರೆ. ಹಳೆ ಕಾಮಗಾರಿಗೆ ಮೀಸಲಿಟ್ಟ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಪೋಲಿಸರು ಸೂಕ್ತ ತನಿಖೆ ನಡೆಸಿರುವುದಿಲ್ಲ. ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಎಲ್ಲಾ ಹಣ ಅಧ್ಯಕ್ಷರ ಆಪ್ತರ ಕೂಲಿ ಕಾರ್ಮಿಕರ ಹೆಸರಿಗೆ ಬಿಡುಗಡೆಯಾಗಿರುತ್ತದೆ. ಮೂಲ ಕಾರ್ಮಿಕರಿಗೆ ಹಣ ಬಿಡುಗಡೆಯಾಗಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

ಆದ್ದರಿಂದ 2011-12 ಹಾಗೂ 2012-13ನೇ ಸಾಲಿನ ಕ್ರೀಯಾ ಯೋಜನೆಯ ಪ್ರತಿಗಳನ್ನು ಪಡೆದು ಹಾಜರುಪಡಿಸುವಂತೆ ಹಾಗೂ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಕೂಲಿ ಕಾರ್ಮಿಕರಿಗೆ ಹಣ ಸಂದಾಯವಾದ ಬಗ್ಗೆ ದಾಖಲಾತಿಗಳು ಹಾಗೂ ಬ್ಯಾಂಕ್ ಸ್ಟೇಟ್‌ಮೆಂಟ್ ವಿವರಗಳನ್ನು ಪಡೆದು ಹಾಜರುಪಡಿಸುವಂತೆ ಪೋಲಿಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರಿಗೆ ಆದೇಶಿಸಲಾಗಿತ್ತು.

ಪೋಲಿಸ್ ಅಧೀಕ್ಷಕರು (ಪ್ರಭಾರ), ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರು ದಾಖಲಾತಿಗಳನ್ನು ಪಡೆದು ಸಲ್ಲಿಸಿದ್ದು, ದಾಖಲಾತಿಗಳನ್ನು ಪರಿಶೀಲಿಸಿದಾಗ, ಬಿದರಹಳ್ಳಿ ಗ್ರಾಮದ ಕುಬೇರನಾಯ್ಕ ಮನೆಯಿಂದ ಶಂಕ್ರನಾಯ್ಕನ ಮನೆಯ ಹಿತ್ತಲಿನವರೆಗೆ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಯ ಬಗ್ಗೆ ಯಾವುದೇ ಕ್ರಿಯಾ ಯೋಜನೆ ಕಂಡುಬರುತ್ತಿಲ್ಲ. ಪೋಲಿಸ್ ಅಧೀಕ್ಷಕರ ವರದಿಯಲ್ಲಿ ಸದರಿ ಕಾಮಗಾರಿಯನ್ನು ತುಂಡು ಗುತ್ತಿಗೆ ಮೇಲೆ ನಿರ್ವಹಿಸಲು ರೂ.28,000/-ಕ್ಕೆ ಕ್ರಿಯಾ ಯೋಜನೆ ಆದೇಶವಾಗಿರುತ್ತದೆ ಎಂದು ಹೇಳಿದ್ದು, ಆದರೆ ಅಂತಹ ಯಾವುದೇ ಕ್ರಿಯಾಯೋಜನೆ ತನಿಖಾಧಿಕಾರಿ ಹಾಜರುಪಡಿಸಿರುವ ದಾಖಲಾತಿಯಲ್ಲಿ ಕಂಡುಬರುತ್ತಿಲ್ಲ.

ಚಿನ್ನಿಕಟ್ಟೆ ಗ್ರಾಮ ಪಂಚಾಯತಿ 2011-12ನೇ ಸಾಲಿನ 13ನೇ ಹಣಕಾಸು ಯೋಜನೆಯಡಿಯಲ್ಲಿ ತಯಾರಿಸಿರುವ ಕ್ರಿಯಾ ಯೋಜನೆ ಪಟ್ಟಿಯಲ್ಲಿ ಕ್ಯಾತಿನಕೊಪ್ಪ ಗ್ರಾಮದ ರಸ್ತೆ ಅಭಿವೃದ್ಧಿ ಬದಲಾಗಿ ಚಿನ್ನಿಕಟ್ಟೆ ಪರ್ವತಪ್ಪನ ಮನೆಯಿಂದ ಅಂಗನವಾಡಿವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯ ಅನುಮೋದನೆಗಾಗಿ ಕ್ರಿಯಾ ಯೋಜನೆ ಬದಲಾವಣೆಯ ಬಗ್ಗೆ ಚಿನ್ನಿಕಟ್ಟೆ ಗ್ರಾಮ ಪಂಚಾಯತಿಯವರು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಹೊನ್ನಾಳಿ ಇವರಿಗೆ ಕೋರಿರುವುದು ಕಂಡುಬರುತ್ತದೆ. ಆದರೆ ಸದರಿ ಕ್ರಿಯಾ ಯೋಜನೆ ಬದಲಾವಣೆ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಯವರು ಅನುಮೋದನೆಯನ್ನು ನೀಡಿರುವ ಬಗ್ಗೆ ಯಾವುದೇ ದಾಖಲಾತಿ ಕಂಡುಬರುತ್ತಿಲ್ಲ. ಮೇಲಿನ ಅಂಶಗಳನ್ನು ಗಮನಿಸಿದಾಗ, ಕ್ರಿಯಾ ಯೋಜನೆ ಇಲ್ಲದೆಯೇ ಕಾಮಗಾರಿ ನಿರ್ವಹಿಸಿರುವುದು ಮತ್ತು ಕ್ರಿಯಾ ಯೋಜನೆಯನ್ನು ಬದಲಾವಣೆ ಮಾಡಿರುವುದು ಕಂಡುಬರುತ್ತಿದ್ದು, ಅದನ್ನು ಗಮನಿಸಿದಾಗ, ಎದುರುದಾರರು ಕರ್ತವ್ಯಲೋಪ ಎಸಗಿರುವುದು ಕಂಡುಬರುತ್ತದೆ. ತನಿಖಾಧಿಕಾರಿ ಹಾಜರುಪಡಿಸಿರುವ ದಾಖಲೆಗಳಲ್ಲಿ ಕೂಲಿ ಕಾರ್ಮಿಕರಿಗೆ ಒಟ್ಟು ರೂ.92,070/-ಗಳನ್ನು ಸುಮಾರು 85 ಕೂಲಿ ಕಾರ್ಮಿಕರ ಖಾತೆಗೆ ತಲಾ ರೂ.1,085/- ರಂತೆ ಜಮಾ ಮಾಡಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಿದ್ದು, ಆದರೆ ವರದಿಯಲ್ಲಿ ಹೇಳಿರುವ ಉಳಿದ 2 ಕಾಮಗಾರಿಗಳ ಬಗ್ಗೆ ಹಣವನ್ನು ಪಾವತಿಸಿರುವ ಬಗ್ಗೆ ಯಾವುದೇ ದಾಖಲಾತಿಗಳು ಕಂಡುಬರುತ್ತಿಲ್ಲ. ಆದ್ದರಿಂದ 1 ರಿಂದ 3ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆ.

2ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ನಿಯಮಗಳನ್ನು ಉಲ್ಲಂಘಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಇವರು ಮಾರ್ಚ 2015 ರಲ್ಲಿ ನಿವೃತ್ತಿ ಹೊಂದಿರುವುದರಿಂದ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಸದರಿಯವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(2)(ಬಿ)(i) ಅಡಿಯಲ್ಲಿ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14-ಎ ಅಡಿಯಲ್ಲಿ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಲಾಗಿದೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/111/ಗ್ರಾಪಂಕಾ/2018, ಬೆಂಗಳೂರು, ದಿನಾಂಕ: 16–03–2018.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಹಳದಪ್ಪ, ಹಿಂದಿನ ಕಾರ್ಯದರ್ಶಿ (ಹಾಲಿ ನಿವೃತ್ತ), ಚಿನ್ನಿಕಟ್ಟೆ ಗ್ರಾಮ ಪಂಚಾಯಿತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರು ಮಾರ್ಚ 2015 ರಂದು ನಿವೃತ್ತಿ ಹೊಂದಿರುವುದರಿಂದ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966 ರ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಗಳು 214(2)(ಬಿ)(i) ಅಡಿಯಲ್ಲಿ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14–ಎ ಅಡಿಯಲ್ಲಿ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ–8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

16/3

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಗೆ:</u>

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 321 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ದಾವಣಗೆರೆ, ದಾವಣಗೆರೆ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಹೊನ್ನಾಳಿ, ದಾವಣಗೆರೆ ಜಿಲ್ಲೆ.
6. ಶ್ರೀ ಹಳದಪ್ಪ, ಹಿಂದಿನ ಕಾರ್ಯದರ್ಶಿ (ಹಾಲಿ ನಿವೃತ್ತ), ಚಿನ್ನಿಕಟ್ಟೆ ಗ್ರಾಮ ಪಂಚಾಯಿತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.
7. ಗಣಕ ಕೋಶ–ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.